ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		12(124)
ಸದಸ್ಯರ ಹೆಸರು		ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ		02-03-2020
ಉತ್ತರಿಸಬೇಕಾದ ಸಚಿವರು		ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಪ್ರಶ್ನೆ		ಉತ್ತರ
ಅ)	ರಾಜ್ಯ ಸರ್ಕಾರದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು)	ಪ್ರಸ್ತುತ 2019-20ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ:14,545. (ಅನುಬಂಧದಲ್ಲಿ ನೀಡಲಾಗಿದೆ)
ಆ)	ಅತಿಥಿ ಉಪನ್ಯಾಸಕರುಗಳಿಗೆ ನೀಡುವ ಮಾಸಿಕ ಗೌರವಧನ ಎಷ್ಟು: ಗೌರವಧನ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವೇನು;	ದಿನಾಂಕ:04.04.2017ರ ಸರ್ಕಾರದ ಆದೇಶ ಸಂಖ್ಯೆ: ಇಡಿ/66/ಡಿಸಿಇ/2017ರನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಕನಿಷ್ಠ ಶೇ.55ರಷ್ಟು ಅಂಕಗಳನ್ನು ಪಡೆದು ಎನ್‌ಇಟಿ/ಎಸ್‌ಎಲ್‌ಇಟಿ ಅಥವಾ ಪಿ.ಹೆಚ್‌ಡಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ಮಾಸಿಕ ಗೌರವಧನದ ಮೊತ್ತವನ್ನು ಮಾರ್ಚ್-2017 ರಿಂದ ಜಾರಿಗೆ ಬರುವಂತೆ ರೂ.11,500/- ರಿಂದ ರೂ.13,000/-(ಹದಿಮೂರು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಹಾಗೂ ಇತರೆ ಅತಿಥಿ ಉಪನ್ಯಾಸಕರ ಮಾಸಿಕ ಗೌರವಧನದ ಮೊತ್ತವನ್ನು ರೂ.9,500/- ರಿಂದ ರೂ.11,000/- (ಹನ್ನೊಂದು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ ಹೆಚ್ಚಿಸಲಾಗಿದೆ. ಪ್ರಸ್ತುತ ಪಾವತಿಸಲಾಗುತ್ತಿರುವ ಮಾಸಿಕ ಗೌರವಧನದ ಮೊತ್ತವನ್ನು ಪರಿಷ್ಕರಿಸುವ ಸಂಬಂಧ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.
ಇ)	ಯಾವ ಕಾಲಮಿತಿಯಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಹೆಚ್ಚಳ ಮಾಡಲಾಗುವುದು.	ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಹೆಚ್ಚಳ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು, ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ಕೂಡಲೇ ಪರಿಷ್ಕೃತ ಗೌರವಧನ ಹೆಚ್ಚಿಸಿ ಆದೇಶವನ್ನು ಹೊರಡಿಸಲಾಗುವುದು.

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಇಡಿ 57 ಡಿಸಿಇ 2020

ಅನುಬಂಧ

2019-20ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆ	ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ
1	ಬಾಗಲಕೋಟೆ	470
2	ಬೆಂಗಳೂರು	778
3	ಬೆಂಗಳೂರು ಗ್ರಾಮಾಂತರ	163
4	ಬೆಳಗಾವಿ	554
5	ಬಳ್ಳಾರಿ	748
6	ಬೀದರ	230
7	ಬಿಜಾಪುರ	329
8	ಚಾಮರಾಜನಗರ	207
9	ಚಿಕ್ಕಮಗಳೂರು	447
10	ಚಿಕ್ಕಬಳ್ಳಾಪುರ	351
11	ಚಿತ್ರದುರ್ಗ	612
12	ದಕ್ಷಿಣ ಕನ್ನಡ	602
13	ದಾವಣಗೆರೆ	490
14	ಧಾರವಾಡ	258
15	ಗದಗ	328
16	ಕಲಬುರಗಿ	442
17	ಹಾಸನ	959
18	ಹಾವೇರಿ	457
19	ಕೋಲಾರ	407
20	ಕೊಪ್ಪಳ	427
21	ಮಡಿಕೇರಿ	124
22	ಮಂಡ್ಯ	579
23	ಮೈಸೂರು	1040
24	ರಾಯಚೂರು	416
25	ರಾಮನಗರ	285
26	ಶಿವಮೊಗ್ಗ	636
27	ತುಮಕೂರು	717
28	ಉಡುಪಿ	512
29	ಉತ್ತರ ಕನ್ನಡ	667
30	ಯಾದಗಿರಿ	310
ಒಟ್ಟು		14545